**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಓ.ಎಸ್.293/2014**

**ಡಿ.ಡಬ್ಲ್ಯೂ - 1**

**ಪ್ರಮಾಣೀಕರಿಸಿದ ದಿನಾಂಕ:18.01.2025**

**ಮುಂದುವರೆ ಪಾಟೀ ಸವಾಲು : ವಾದಿ ಪರ ವಕೀಲರಿಂದ : -**

ದಿ:16.03.2009 ರಂದು ಎರಡು ಅಂತಿಮ ಡಿಕ್ರಿಯ ಮೂಲಪತ್ರಿಗಳು ನನ್ನ ಹತ್ತಿರ ಇರುತ್ತವೆ. ನಿ.ಪಿ.8 ಮತ್ತು 11 ಗಳನ್ನು ನ್ಯಾಯಾಲಯದಿಂದ ಡಿಕ್ರಿ ಪಡೆದಂತೆ ಯಥರೂಪದಲ್ಲಿ ನೋಂದಣಿ ಮಾಡಿಸಿರುತ್ತೇವೆ. ಸದರಿ ನಿ.ಪಿ.8 ಮತ್ತು 11 ಗಳ ಮೊದಲು ನಿ.ಪಿ.12 ಅನ್ನು ನೊಂದಣಿ ಮಾಡಿಸಿರುತ್ತೇವೆ. ನಿ.ಪಿ.12 ಕ್ಕೆ ನಮ್ಮ ಕುಟುಂಬದವರೆಲ್ಲರೂ ಸಹಿ ಮಾಡಿರುತ್ತೇವೆ ಎಂದರೆ ಸರಿ. ನಿ.ಪಿ.12 ರ ದಾಖಲೆ ಸಂಖ್ಯೆ:5909 ಎಂದರೆ ಸರಿ. ನಿ.ಪಿ.12 ರ ಸಮಯದಲ್ಲಿ ಹಕ್ಕುಬಿಡುಗಡೆ ಪತ್ರ ಬರೆದುಕೊಡುವ ಬಗ್ಗೆ ಮಾತುಕತೆ ಆಗಿದಿಲ್ಲದ ಕಾರಣ ನಿ.ಪಿ.12 ರಲ್ಲಿ ಸದರಿ ಪತ್ರದ ಬಗ್ಗೆ ಉಲ್ಲೇಖಿಸಿರುವುದಿಲ್ಲ. ರಾಧಾದೇವಿಯವರಿಗೆ ಕ್ರಯಪತ್ರ ಮಾಡಿಕೊಟ್ಟ ನಂತರ, ನಾವು ಮನೆಗೆ ಹೋಗಿ ಕುಟುಂಬದ ಸದಸ್ಯರೆಲ್ಲರೂ ಚರ್ಚಿಸಿ, ಮರುದಿನ ನನ್ನ ಸಹೋದರಿಯರಿಗೆ ತಲಾ ರೂ.1,50,000/- ದಂತೆ ಸದರಿ ಕ್ರಯದಿಂದ ಬಂದ ಮೊಬಲಗುನ್ನು ನೀಡಿ, ಅವರ ಒಪ್ಪಿಗೆಯಂತೆ, ಸ್ವತ್ತುಗಳನ್ನು ನಮಗೆ ಅನುಭವಿಸಲು ಅವರು ಬಿಟ್ಟುಕೊಟ್ಟರು. ದಿ:16.03.2009 ರಂದು ದಾಖಲೆ ಸಂಖ್ಯೆ:5714 ರಂತೆ ಕ್ರಯಪತ್ರದ ನೊಂದಣಿಯನ್ನು ಪ್ರಾರಂಭಿಸಿ, ನಂತರ ದಾಖಲೆ ಸಂಖ್ಯೆ:5909 ರಂತೆ ರಾಧಾದೇವಿಯವರಿಗೆ ನಿ.ಪಿ.12 ರ ಪ್ರಕಾರ ಕ್ರಯಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಅದು ಸಂಜೆ 5:19 ನಿಮಿಷಕ್ಕೆ ನೊಂದಣಿ ಆಗಿರುತ್ತದೆ ಎಂದರೆ ಸರಿ. ವಾದಿಗಳ ಕುಟುಂಬಸ್ಥರು ನಿ.ಪಿ.12 ಕ್ಕೆ ಪಕ್ಷಗಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ನಿ.ಪಿ.13 ಅನ್ನು ಸಹ ದಿ:16.03.2009 ರಂದು ನೊಂದಣಿ ಮಾಡಿಸಲಾಗಿದೆ ಎಂದು ಕೇಳಲಾಗಿ ಸಾಕ್ಷಿ ಅದನ್ನು ನೊಂದಣೀ ಮಾಡಿಸಲು ಸದರಿ ದಿನ ಪ್ರಾರಂಭಿಸಿದ್ದು, ಅವಧಿ ಮುಗಿದ ಸಲುವಾಗಿ ಮರುದಿನ ನೊಂದಾಯಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.13 ರಲ್ಲಿ ಅದು ದಿ:17.03.2009 ಸಮಯ 12:09 ನಿಮಿಷಕ್ಕೆ ನೊಂದಣಿ ಆಗಿರುತ್ತದೆ ಎಂದು ನಮೂದಿಸಲಾಗಿದೆ ಎಂದರೆ ಸರಿ.

ನಿ.ಪಿ.12 ನ್ನು ನೊಂದಾಯಿಸುವ ದಿನದಂದೇ ನನ್ನ ಸಹೋದರಿ ಹಾಗೂ ಅವರ ಮಕ್ಕಳಿಗೆ ರೂ.4,50,000/- ಗಳನ್ನು ನಗದಾಗಿ ನೀಡಿರುತ್ತೇವೆ ಎಂದು ಬರೆಯಿಸಿಕೊಂಡು ರಿಲೀಸ್ ಪತ್ರಕ್ಕೆ ಸಹಿ ಹಾಕಿಸಿಕೊಂಡು, ಅವರಿಗೆ ಗೊತ್ತಾಗದಂತೆ ಮರುದಿನ ಅದನ್ನು ನೊಂದಾಯಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.12 ಮತ್ತು 13 ರಲ್ಲಿರುವ ದಾಖಲೆ ಸಂಖ್ಯೆಗಳನ್ನು ನೋಡಿದಾಗ ನಿ.ಪಿ.13 ನಿ.ಪಿ.12 ರ ಮೊದಲು ನೊಂದಣೀಗೆ ನೀಡಲಾಗಿತ್ತು ಎಂದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ನಿ.ಪಿ.13 ರಲ್ಲಿ ದಾಖಲೆ ಸಂಖ್ಯೆ:5701 ಎಂದು ನಮೂದಿದೆ ಎಂದರೆ ಸರಿ. ನಿ.ಪಿ.11 ರಲ್ಲಿ ದಾಖಲೆ ಸಂಖ್ಯೆ:5705 ಎಂದು ಮತ್ತು ನಿ.ಪಿ.8 ರಲ್ಲಿ ಸಂಖ್ಯೆ:5710 ಎಂದು ನಮೂದಿದ್ದು, ನಿ.ಪಿ.13 ರ ನಂತರ ನೊಂದಾವಣೆ ಆಗಿರುವ ದಾಖಲೆಗಳಾಗಿರುತ್ತವೆ ಎಂದರೆ ಸರಿ. ನಾವು ನನ್ನ ಸಹೋದರಿ ಹಾಗೂ ಸಹೋದರಿಯ ಮಕ್ಕಳೀಗೆ ಉಪನೊಂದಾಣಾಧಿಕಾರಿಗಳ ಕಚೇರಿಯಲ್ಲಿಯೇ ನಿ.ಪಿ.13 ರಲ್ಲಿ ನಮೂದಿಸಿರುವ ನಗದನ್ನು ನೀಡಿರುತ್ತೇನೆ. ನಿ.ಪಿ.12 ರ ಸಮಯದಲ್ಲಿ ರಾಧಾದೇವಿಯವರು ನಗದು ಹಣವನ್ನ ನೀಡಿರುವುದಿಲ್ಲ, ಚೆಕ್ಕು ಮತ್ತು ಡಿ.ಡಿ ಮುಖಾಂತರ ನೀಡಿರುತ್ತಾರೆ. ಸದರಿ ನಿ.ಪಿ.13 ರಡಿಯಲ್ಲಿ ನೀಡಿರುವ ನಗದನ್ನು ಬ್ಯಾಂಕಿನಿಂದ ಪಡೆದ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ನಿ.ಪಿ.13 ನ್ನು ಬರೆದುಕೊಡುವಾಗ ಅದರಲ್ಲಿರುವ ಸಹೋದರಿ ಮತ್ತು ಸಹೋದರಿಯ ಮಕ್ಕಳಿಗೆ ಅದರಲ್ಲಿರುವ ವಿಷಯಗಳನ್ನು ಓದಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.13 ರಲ್ಲಿ ಓ.ಎಸ್.941/2007 ದಾವೆ ಡಿಕ್ರಿಯಾದ ಬಗ್ಗೆ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ನಿ.ಪಿ.8 ಮತ್ತು 11 ರಲ್ಲಿ ನಿ.ಪಿ.13 ರ ಪ್ರಕಾರ ಹಕ್ಕುಬಿಡುಗಡೆ ಮಾಡಿಕೊಡಲಾಗುತ್ತದೆ ಎಂದು ಹೇಳಿರುವುದಿಲ್ಲ. ದಿ:12.11.2008 ರಲ್ಲಿ ರಾಜಿ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ನಿ.ಡಿ.12 ಅನ್ನು ಮಾಡಿಕೊಡುವ ಸಮಯದಲ್ಲಿ ನಿ.ಡಿ.8 ಮತ್ತು 11 ರ ಅಂತಿಮ ಡಿಕ್ರಿಯನ್ನು ನೊಂದಣಿ ಮಾಡಿಸಿಕೊಳ್ಳುವ ಬಗ್ಗೆ ತಿರ್ಮಾನಿಸಿದೆವು. ನಿ.ಪಿ.13 ಅನ್ನು ನೋಂದಾಯಿಸುವ ಸಮಯದಲ್ಲಿ ಅದರ ಪ್ರತಿಗಳನ್ನು ನನ್ನ ಸಹೋದರಿ ಮತ್ತು ಅವರ ಮಕ್ಕಳಿಗೆ ಅವರು ಅವಶ್ಯವಿಲ್ಲ ಎಂದು ಹೇಳಿರುವ ಕಾರಣ ನೀಡಿರುವುದಿಲ್ಲ. ನಾವು ಅವರಿಗೆ ನಿ.ಪಿ.8, 11 ಮತ್ತು 12 ಗಳನ್ನು ಮಾತ್ರ ನೊಂದಣಿ ಮಾಡಿಸುತ್ತಿದ್ದೇವೆ ಎಂದು ನಂಬಿಸಿ, ನಿ.ಪಿ.13 ಅನ್ನು ಬರೆಯಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿಯವರಿಗೆ ಮೋಸ ಮಾಡುವ ಉದ್ದೇಶೀದಿಂದ ನಿ.ಪಿ.13 ಅನ್ನು ಬರೆಯಿಸಿಕೊಳ್ಳುವ ಅವಸರದಲ್ಲಿ, ಆ ದಾಖಲೆಯಲ್ಲಿ ಒಟ್ಟು ರೂ.4,50,000/- ಗಳಲ್ಲಿ ಯಾರಿಗೆ

ಎಷ್ಟು ಹಣವನ್ನು ನೀಡಿರುತ್ತೇವೆ ಎಂದು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ವಾದಿಗಳು ಪ್ರಸ್ತುತ ದಾವೆಯನ್ನು ಸಲ್ಲಿಸಿ ಭಾಗಂಶವನ್ನು ಕೋರಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿಗಳಿಗೆ ಭಾಗವನ್ನು ನೀಡಲು ನಮಗೆ ತೊಂದರೆ ಇರುತ್ತದೆ. ದಾವಾ ಸ್ವತ್ತಿನಲ್ಲಿ ವಾದಿಗಳು ಸಹ, ಸ್ವಾಧೀನದಲ್ಲಿದ್ದು, ಅವರಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನೀಲಗಿರಿ ಬೆಳೆಗಳನ್ನು ನಾನು ಬೆಳೆದಿದ್ದು, 3-4 ವರ್ಷಕ್ಕೊಮ್ಮೆ ಕತ್ತರಿಸುತ್ತೇನೆ. ಈ ಕುರಿತು ದಾಖಲೆ ಹಾಜರುಪಡಿಸಿರುವುದಿಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**